ಬಳಿಯೂ ಕೇಳಿದ್ದ. 'ಹೊಳೆಯಾಚೆಗೆ ಸಾಗರ ಇದೆ. ಸಾಗರದಾಚೆಗೆ ಬೆಂಗಳೂರು ಇದೆ. ಅಲ್ಲಿಗೆ ಬಂದು ಬಿಡು' ಅವಳು ಸುಲಭದಲ್ಲಿ ಹೇಳಿದ್ದಳು. ಹುಟ್ಟುವಾಗಲೇ ಹೆಣ್ಣಿನೊಳಗೊಂದು ಅಲೆಮಾರಿ ಮನಸ್ಥಿತಿ ಇರುತ್ತದೆ. ಶತಶತಮಾನದಿಂದಲೂ ತವರನ್ನು ಬಿಟ್ಟು ಗಂಡನ ಮನೆಗೆ ಹೋಗುತ್ತಿರುವವಳು ಆಕೆ. ಹುಟ್ಟೂರನ್ನು ಬಿಡುವುದು ಅವಳ ಜೀನ್ಸ್ ನಲ್ಲೇ ಇದೆ. ಹರಿಯುವುದನ್ನೇ ಬದುಕೆಂದು ನಂಬಿರುವ ನದಿಯವಳು. ಆದರೆ, ತಾನು ನಿಂತಲ್ಲೇ ಹರಿದಂತೆ ನಟಿಸುತ್ತಿರುವ ಜಲಾಶಯದಂಥವನು! ತನಗೆ ಗೋಡೆಗಳಿವೆ. ಎಂದೋ ಮುಚ್ಚಿಹೋದ ಗೇಟುಗಳಿವೆ. ತಾನಿನ್ನು ಹರಿಯಲಾರೆ: ಯಾವ ಬೆಂಗಳೂರಿಗೂ!

ಹೀಗೆ ಪರಸ್ಪರ ವಿರುದ್ಧವಾದ ನದಿಗಳೆರಡು ನಡುವಲ್ಲೆಲ್ಲೋ ಭೇಟಿಯಾದಂತೆ ಅವರಿಬ್ಬರೂ ಒಬ್ಬರಿಗೊಬ್ಬರು ಸಿಕ್ಕಿದ್ದರು. ಅಂದು ಲಾಂಚು ದಾಟಿ ದಡಕ್ಕಿಳಿದವಳಿಗೆ 'ಸಾಗರದ ಬಸ್ಸು ಸಿಕ್ತಾ?' ಎಂದು ಶ್ರೀಮುಖ ಕರೆ ಮಾಡಿದ್ದ. ರಾತ್ರಿ ಬೆಂಗಳೂರಿನ ಬಸ್ಸು ಹತ್ತಿದ ಕೂಡಲೇ ಆಕೆ 'ಬಸ್ಸು ಬಂತು. ನಿಮ್ಮ ಊಟ ಆಯ್ತಾ? ಅಮ್ಮನದ್ದು ಆಯ್ತಾ?' ಎಂದು ತಿರುಗಿ ಕರೆ ಮಾಡಿದ್ದಳು. ಬಸ್ಸುಗಳೆಲ್ಲಾ ಸಿಕ್ಕಿ, ಹೋಗಬೇಕಾದ ಊರಿಗೆ ಹೋದ ಮೇಲೂ ಅವರ ಈ ಮಾತುಕತೆಗಳು ಮಾತ್ರ ಮುಗಿಯಲಿಲ್ಲ. ತಾವೇಕೆ ಹೀಗೆ ಒಬ್ಬರಿಗೊಬ್ಬರು ಕಾಳಜಿ ತೋರಿಸಿಕೊಳ್ಳುತ್ತಿದ್ದೇವೆ ಎಂಬುದಕ್ಕೆ ಇಬ್ಬರಲ್ಲೂ ಉತ್ತರವಿರಲಿಲ್ಲ. ಶ್ರೀಮುಖ ಸ್ಟೇಟಸ್ ಗೆ ಹಾಕುವ ನದಿಯ, ಗದ್ದೆಯ, ಹಳ್ಳಿಯ ಫೋಟೊಗಳಿಗೆ ಅವಳು ತಪ್ಪದೇ ಉತ್ತರಿಸುತ್ತಿದ್ದಳು. ಅವಳ ಆಫೀಸಿನ ಗುಣಾಕಾರ, ಭಾಗಾಕಾರಗಳನ್ನು ಇವನು ಕೇಳಿಸಿಕೊಳ್ಳುತ್ತಿದ್ದ. ನಡುನಡುವೆ ಅಮ್ಮ ಸಹಾ 'ಹೆಂಗಿದ್ದೆ ಕೂಸೇ? ಈ ಸಲ ಚಲೋ ಮಾವಿನ್ ಹಣ್ಣಾಯ್ದು. ರಜೆ ಇದ್ದಾಗ ಬಾ ಅಕಾ' ಎಂದು ಮಧ್ಯ ಪ್ರವೇಶಿಸುತ್ತಿದ್ದಳು.

ಆ ವರ್ಷ ಬಿಸಿಲು ಹೆಚ್ಚೇ ಇದ್ದುದರಿಂದ ಜಲಾಶಯ ಕಿಲೋಮೀಟರುಗಳಷ್ಟು ಹಿನ್ನೆಗೆದಿತ್ತು. ಶ್ರೀಮುಖ ಕಳಿಸಿದ ಅದರ ಫೋಟೊಗಳನ್ನು ನೋಡಿದ ಅವಳು ಏನೋ ಒಂದು ನೆಪ ಮಾಡಿಕೊಂಡು ಬಂದೇ ಬಿಟ್ಟಿದ್ದಳು. ಆ ದಿನ ಬೆಳಗ್ಗೆ ಅಮ್ಮ ಮಾಡಿಕೊಟ್ಟ ನೀರ್ದೋಸೆ ಹಾಗೂ ಮಾವಿನ ಹಣ್ಣಿನ ಸೀಕರಣೆ ತಿಂದು ಅವರಿಬ್ಬರೂ ಮುಳುಗಡೆ ಜಗತ್ತಿನ ಕಡೆಗೆ ನಡೆದಿದ್ದರು. ಇಷ್ಟು ದಿನ ಇಲ್ಲದ ಲೋಕವೊಂದು ಅಲ್ಲಿ ನೀರಿನಾಳದಿಂದ ಎದ್ದು ಬಂದಿತ್ತು. ಹಿಂದೆಂದೋ ಮನೆ, ಮಠ, ಗುಡಿ, ಹೊಲ, ತೋಟಗಳಾಗಿ ಓಡಾಡುವ ಜನರಿಂದ ತುಂಬಿದ್ದ ಜಾಗವೀಗ ಕೇವಲ ಹೆಜ್ಜೆ ಗುರುತುಗಳಷ್ಟೇ ಉಳಿದ ಕೆರೆಯ ತಳದಂತೆ ನಿಂತಿತ್ತು. ಗಟ್ಟಿಯಾಗಿ ಕಟ್ಟಿದ ಮನೆ ಗೋಡೆಗಳ ಒಂದೋ, ಎರಡೋ ಸಾಲುಗಳು ಉಳಿದಿದ್ದವು. ಅಲ್ಲೇ ಬಿದ್ದಿದ್ದ ಬಾಗಿಲಿನ ಪಳೆಯುಳಿಕೆಯೊಂದು ತಾನು ತೆರೆದ, ಮುಚ್ಚಿದ ಕಥೆ ಹೇಳುತ್ತಾ ಮಲಗಿತ್ತು. ದೈತ್ಯ ಬೀಸುವ ಕಲ್ಲೊಂದು ತಾನು ಬೀಸಿ ಬೀಸಿ ತಲೆಮಾರೊಂದಕ್ಕೆ ಅರೆದು ಕೊಟ್ಟ ಪದಾರ್ಥಗಳ ಮೆಲುಕು ಹಾಕುತ್ತಾ ಮಲಗಿತ್ತು. ಪ್ಲಾಸ್ಟಿಕ್ಕಿನ ಆನೆಯೊಂದು ತನ್ನನ್ನು ಎತ್ತಿ ಆಡುವ ಮಗುವಿನ ಕೈಯ ಬಿಸುಪಿಗಾಗಿ ಕಾಯುತ್ತಿರುವಂತೆ ಅನಾಥವಾಗಿ ಬಿದ್ದಿತ್ತು. ಗದ್ದೆಗಾಗಿ ಮಾಡಿದ ಏರಿಗಳು ಅಂದ, ಆಕಾರ ಕಳೆದುಕೊಂಡು ಕೇವಲ ಏರು, ತಗ್ಗುಗಳಾಗಿ ನಿಂತುಬಿಟ್ಟಿದ್ದವು. ಅಲ್ಲಿಂದ ಮನುಷ್ಯ ಎದ್ದು ಹೋಗಿ ದಶಕಗಳೇ ಕಳೆದಿದ್ದರೂ ಅವನ ಅಸ್ತಿತ್ವದ ಕುರುಹುಗಳು ಮಾತ್ರ ನಾಗರೀಕತೆಯೊಂದರ ಪಳೆಯುಳಿಕೆಗಳಂತೆ ಅವನ ನಗು, ಅಳು, ಹಸಿವು, ಬದುಕುಗಳ ಕಥೆ ಹೇಳುತ್ತಾ ಇತಿಹಾಸದ ಹರಿದ ಪುಟಗಳಂತೆ ಚೆಲ್ಲಾ ಚೆದುರಾಗಿ ಬಿದ್ದಿದ್ದವು.

'ಯಾವುದು ಕಣ್ಣೆದುರು ನಿಲ್ಲುತ್ತದೋ ಅದು ನಮಗೆ ಆಸಕ್ತಿಕರ ಅನಿಸುವುದಿಲ್ಲ. ಯಾವುದು ನಿಗೂಢತೆಯ ಆಳದಲ್ಲಿ ಬಚ್ಚಿಟ್ಟುಕೊಳ್ಳುತ್ತದೋ ಅದನ್ನು ಅದ್ಭುತ ಅನ್ನುತ್ತೇವೆ ಅಲ್ವಾ?' ಬಡ್ಡು ಹಿಡಿದು ಬಿದ್ದಿದ್ದ ಕತ್ತಿಯೊಂದನ್ನೆತ್ತಿಕೊಳ್ಳುತ್ತಾ ಹಾಗೆಂದಿದ್ದ ಶ್ರೀಮುಖ.

'ನಾಗರೀಕತೆಗಳು ನಮ್ಮನ್ನು ಕಾಡುವುದೇ ಈ ಕಾರಣಕ್ಕೆ. ಅವು ಅಳಿಯದೇ ಹೋಗಿದ್ದರೆ ನಾವಿಂದು ಅವುಗಳ ಬಗ್ಗೆ ಯೋಚಿಸುತ್ತಲೇ ಇರಲಿಲ್ಲವೇನೋ ಅಲ್ವಾ? ನಿಗೂಢತೆಯಾಳಕ್ಕೆ ಸರಿದುಹೋಗಿದುದರಿಂದಲೇ ಮನುಷ್ಯ ಇಂದು ಅವುಗಳ ಬೆನ್ನು ಬಿದ್ದಿದ್ದಾನೆ'.

ಏರು ಬಿಸಿಲಿನ ಝಳಕ್ಕೆ ದುಪಟ್ಟಾವನ್ನು ತಲೆಯ ಮೇಲೆ ಹೊದ್ದುಕೊಳ್ಳುತ್ತಾ ಹೇಳಿದ್ದಳು ಮನೋಹರಿ. ಅವಳ ಮುಡಿಯಲ್ಲಿ ಕೆಲವೇ ನಿಮಿಷಗಳ ಹಿಂದೆ ಶ್ರೀಮುಖನ ಮನೆಯಂಗಳದ ಗಿಡದಿಂದ ಕುಯ್ದು